<u>ದಿ : **17-03-2026** ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದೆ. ಸದರಿ ಪ್ರಮಾಣಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ಅದರಲ್ಲಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ.

<u>ಮುಂದುವರಿದ ಮುಖ್ಯ ವಿಚಾರಣೆ:- **2** ನೇ ಎದುರುದಾರರ ಪರ ವಕೀಲರಿಂದ:</u>

ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದೇನೆ.

1) ಸಾಕ್ಷಿಯನ್ನು ನೀಡಲು 2 ನೇ ವಿಮಾದಾರ ಕಂಪನಿಯವರು ನನಗೆ ನೀಡಿದ ಅಧಿಕಾರ ಪತ್ರ

2) ಮಿನಿ ಬಸ್ಸು ಸಂಖ್ಯೆಕೆಎ-40/ಎ-0362 ರ ವಿಮಾ ಪಾಲಿಸಿಯನ್ನು ಹಾಜರು ಮಾಡಿದ್ದೇನೆ.

ಸದರಿ ದಾಖಲೆಗಳನ್ನು ಕ್ರಮವಾಗಿ ನಿ.ಆರ್.**1** ಮತ್ತು ನಿ.ಆರ್.**2** ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

<u>ಪಾಟೀ ಸವಾಲು : ಅರ್ಜಿದಾರರ ಪರ ವಕೀಲರವರಿಂದಃ</u>

ಅಪಘಾತ ಸಂದರ್ಭದಲ್ಲಿ ಮಿನಿ ಬಸ್ಸು ಚಾಲಕನಿಗೆ ಚಾಲನಾ ಪ್ರಮಾಣ ಪತ್ರ ಇತ್ತು ಎಂದರೆ ಸರಿ. ಅದೇ ರೀತಿ ಅಪಘಾತದ ದಿನದಂದು ಸದರಿ ಬಸ್ಸಿಗೆ ನಮ್ಮ ಕಂಪನಿಯಿಂದ ನೀಡಿರುವ ವಿಮಾ ಪಾಲಿಸಿ ಚಾಲ್ತಿಯಲ್ಲಿತ್ತು ಎಂದರೆ ಸರಿ. ಸದರಿ ಬಸ್ಸಿಗೆ ಸಂಬಂಧಿಸಿದ ಪರಮಿಟನ ವಿವರವನ್ನು ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಕಚೇರಿಯಿಂದ ಪಡೆದಿರುತ್ತೇವೆ. ಸದರಿ ಬಸ್ಸಿನ ಪರಮಿಟನ ವಿವರಗಳನ್ನು ಹಾಜರು ಮಾಡಲು ತೊಂದರೆ ಇರುವುದಿಲ್ಲ. ಅರ್ಜಿದಾರನಿಗೆ ಪರಿಹಾರ ದೊರೆಯುವುದನ್ನು ತಪ್ಪಿಸಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> **: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

ಸದಸ್ಯರು, ಹೆಚ್ಚುವರಿ ಮೋಟಾರು ವಾಹನ
ಅಪಘಾತ ಪರಿಹಾರ ಮಂಡಳಿ, ಕುಂದಾಪುರ